ಸರ್ಕಾರ ಈ ಬಗ್ಗೆ ಸರಿಯಾದಂಥ ಒಂದು ನಿರ್ಣಯ ಮಾಡಬೇಕು. ಅಲ್ಲಿಯವರೆಗೆ ಅವರನ್ನು ರಿಲೀವ್ ಮಾಡಬಾರದು.

ಅಧ್ಯಕ್ಷರು:– ಆ ಎಲ್ಲಾ ಮಾಹಿತಿಗಳನ್ನು ತಂದು ಕೊಡಿ.

ಶ್ರೀ ಎನ್.ಹೆಚ್. ಕೋನರಡ್ಡಿ:– ಈ ಬಗ್ಗೆ ಸರ್ಕಾರ ಒಂದು ಸ್ಪಷ್ಟವಾದ ತೀರ್ಮಾನ ಹೇಳಬೇಕು.

ಶ್ರೀ ಟಿ.ಬಿ. ಜಯಚಂದ್ರ:– ಖಂಡಿತವಾಗಿಯೂ ರಿಲೀವ್ ಮಾಡುವುದಕ್ಕೆ ಹೋಗುವುದಿಲ್ಲ.

5. ವಿಷಯ:–ಆಸರ ತಾಲ್ಲೂಕು ಕಟ್ಟಾಯ ಹೋಬಳಿ, ಕಬ್ಬತ್ತಿ ಗ್ರಾಮದಲ್ಲಿರುವ ಜೂನಿಯರ್ ಕಾಲೇಜುನ್ನು ಬೇರೆ ಜಿಲ್ಲೆಗೆ ಸ್ಥಳಾಂತರ ಮಾಡುವುದಕ್ಕೆ ಆದೇಶ ಮಾಡಿರುವ ಬಗ್ಗೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ(ಸಕಲೇಶಪುರ):– ಮಾನ್ಯ ಅಧ್ಯಕ್ಷರೆ, ಮಂತ್ರಿಗಳು ಇಲ್ಲ. ಹಾಗೆಯೇ ನನ್ನ ಪ್ರಶ್ನೆಗೆ ಉತ್ತರ ಕೂಡ ಬಂದಿಲ್ಲ. ತಾವು ಹೇಳಿ ಎಂದರೆ ಹೇಳುತ್ತೇನೆ.

ಅಧ್ಯಕ್ಷರು:– ಮಂತ್ರಿಗಳು ಇದ್ದಾರೆ.

ಶ್ರೀ ಟಿ.ಬಿ. ಜಯಚಂದ್ರ(ಕಾನೂನು, ನ್ಯಾಯ, ಮಾನವ ಹಕ್ಕುಗಳು ಸಂಸದೀಯ ವ್ಯವಹಾರಗಳು ಹಾಗೂ ಶಾಸನ ರಚನೆ ಮತ್ತು ಪಶು ಸಂಗೋಪನಾ ಸಚಿವರು):– ಮಾನ್ಯ ಅಧ್ಯಕ್ಷರೆ, ಉತ್ತರ ಬಂದಿಲ್ಲ.

ಅಧ್ಯಕ್ಷರು:– ವಿಷಯ ಏನೆಂದು mention ಮಾಡಿ,

ಶ್ರೀ ಹೆಚ್.ಕೆ. ಕುಮಾರಸ್ವಾಮಿ:– ಮಾನ್ಯ ಅಧ್ಯಕ್ಷರೆ, ನನ್ನ ಮತಕ್ಷೇತ್ರದ ಆಸರ ತಾಲ್ಲೂಕು ಕಟ್ಟಾಯ ಹೋಬಳಿಯ ಕಬ್ಬತ್ತಿ ಗ್ರಾಮದಲ್ಲಿ ಒಂದು ಜೂನಿಯರ್ ಕಾಲೇಜು ಇದೆ. ಅಲ್ಲಿ ಸುಮಾರು 35 ವಿದ್ಯಾರ್ಥಿಗಳು ಇದ್ದಾರೆ. ಆ ಕಾಲೇಜನ್ನು ಬೇರೆ ಜಿಲ್ಲೆಗೆ ಸ್ಥಳಾಂತರ ಮಾಡುವುದಕ್ಕೆ ಆದೇಶ ಮಾಡಿದ್ದಾರೆ. ಈ ರೀತಿಯಾದರೆ ಹೇಗೆ? ಇದಕ್ಕೆ ಏನಾದರೊಂದು ಕಾರಣ

ಬೇಕಲ್ಲವೇ? ದಯಮಾಡಿ ಅಲ್ಲಿಯೇ ಮುಂದುವರಿಸಿ, ಏಕೆಂದರೆ ಸುತ್ತಮುತ್ತಲಿನ ಸುಮಾರು 15 ಕಿ.ಮೀ. ವ್ಯಾಪ್ತಿಯಲ್ಲಿ ಎಲ್ಲಿಯೂ ಕೂಡ ಕಾಲೇಜು ಇಲ್ಲ. ಇದೆಲ್ಲ ಗ್ರಾಮೀಣ ಪ್ರದೇಶವಾಗಿದ್ದು, ಇಲ್ಲಿ ಬಸ್ ಸಂಚಾರ ಕೂಡ ಇಲ್ಲ.

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ಈ ವಿಷಯವನ್ನು ಮಾನ್ಯ ಸಚಿವರ ಗಮನಕ್ಕೆ ತಂದು ಇದಕ್ಕೆ ಉತ್ತರ ಕೊಡಿಸುತ್ತೇನೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ:– ಅಲ್ಲಿಯೇ ಮುಂದುವರಿಸುತ್ತೀರಾ?

ಶ್ರೀ ಟಿ.ಬಿ. ಜಯಚಂದ್ರ:– ಇದಕ್ಕೆ ಅವರೇ ಉತ್ತರ ಕೊಡಬೇಕು.

ಶ್ರೀ ಹೆಚ್.ಕೆ. ಕುಮಾರಸ್ವಾಮಿ:– ನಾಳೆ ಮಾನ್ಯ ಸಚಿವರಿಂದ ಉತ್ತರ ಕೊಡಿಸುತ್ತೀರಾ?

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಸಚಿವರ ಕಡೆಯಿಂದ ಉತ್ತರ ಕೊಡಿಸುತ್ತೇನೆ.

ಅಧ್ಯಕ್ಷರು:– ಅವರ ಕಡೆಯಿಂದ ಉತ್ತರ ಕೊಡಿಸುತ್ತಾರೆ.

6. ವಿಷಯ:–ತಿಪಟೂರು ಬೈಪಾಸ್ ರಸ್ತೆ ನಿರ್ಮಾಣ ಮಾಡುವ ಬಗ್ಗೆ.

ಶ್ರೀ ಕೆ. ಷಡಕ್ಷರಿ (ತಿಪಟೂರು):– ಮಾನ್ಯ ಅಧ್ಯಕ್ಷರೆ, ತಿಪಟೂರು ಕ್ಷೇತ್ರದಲ್ಲಿ ಬೈಪಾಸ್ ರಸ್ತೆ ಕಾಮಗಾರಿ ಮಾಡತಕ್ಕಂಥದನ್ನು ಸರ್ವೋಚ್ಚ ನ್ಯಾಯಾಲಯದಲ್ಲಿ ರದ್ದು ಪಡಿಸಿದ್ದಾರೆ. ರದ್ದು ಪಡಿಸಿದ ಮೇಲೆ ಸರ್ಕಾರ ಈ ಬಗ್ಗೆ ಏನು ಕ್ರಮ ತೆಗೆದುಕೊಂಡಿದೆ ಎಂಬ ಬಗ್ಗೆ ಮತ್ತೆ ಆ ಬೈಪಾಸ್ ರಸ್ತೆ ಕಾಮಗಾರಿಯನ್ನು ತೆಗೆದುಕೊಳ್ಳತಕ್ಕಂಥ ಪ್ರಸ್ತಾವನೆ ಸರ್ಕಾರದಲ್ಲಿ ಇದೆಯೇ? ಹಾಗೆಯೇ ಇದರ ಜೊತೆಗೆ ತುಮಕೂರು–ಶಿವಮೊಗ್ಗ ಕಾರಿಡಾರ್ ರಸ್ತೆ ನಿರ್ಮಾಣ ಮಾಡತಕ್ಕಂಥ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ ಎಂಬ ಬಗ್ಗೆ ಹಾಗೂ ಆ ರಸ್ತೆಯನ್ನು ಮಾಡತಕ್ಕಂಥ ಸಂದರ್ಭದಲ್ಲಿ ಬೈಪಾಸ್ ರಸ್ತೆಯನ್ನು ತೆಗೆದುಕೊಳ್ಳುತ್ತಾರೆಯೇ ಎಂದು ಹೇಳಬೇಕು.